ಸೃಜನಿ

SRUJANI: Indian Journal of Innovative Research and Development (SIJIRD)
Volume-4 Special Issue 1, March-April 2025, Pp. 74-82
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬೆಳಗಾವಿ ಜಿಲ್ಲೆಯ ಸಾರ್ವಜನಿಕ ಆರೋಗ್ಯ ಮತ್ತು ವೈದ್ಯಕೀಯ ಅಭಿವೃದ್ಧಿ: ಒಂದು ಐತಿಹಾಸಿಕ ವಿಶ್ಲೇಷಣೆ

**ಡಾ. ರಾಜಣ್ಣ ಕೆ[1] ಮತ್ತು ಡಾ. ಸ್ಟ್ಯಾನಿ ಆರ್ ಮಿರಾಂಡಾ[2]**
[1]ಇತಿಹಾಸ ಉಪನ್ಯಾಸಕ, ಇತಿಹಾಸ ವಿಭಾಗ, ಬಿಎ ಆನರ್ಸ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
[2]ಪ್ರಾಧ್ಯಾಪಕ ಮತ್ತು ಮುಖ್ಯಸ್ಥ, ಇಂಗ್ಲಿಷ್ ವಿಭಾಗ ಈಸ್ಟ್ ವೆಸ್ಟ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು.

**Abstract:**
*ಸಾರ್ವಜನಿಕ ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು ಪ್ರತಿ ಸಮಾಜದ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯನ್ನು ಸಾಧಿಸುವ ಪ್ರಮುಖ ಸೂಚಕಗಳಾಗಿವೆ. ಮಾನವ ಸಂಪತ್ತಿನ ಜೀವನಮಟ್ಟವನ್ನು ಉನ್ನತಿಗೇರಿಸುವಲ್ಲಿ ಆರೋಗ್ಯವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮಾನವ ಸಂಪತ್ತನ್ನು ಆರೋಗ್ಯ ಸೇವೆಗಳ ಚಟುವಟಿಕೆಗಳ ಮೂಲಕ ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸುವ, ಜೀವಿತಾವಧಿಯನ್ನು ಹೆಚ್ಚಿಸುವ ಮತ್ತು ಉತ್ತಮ ಆರೋಗ್ಯವಂತ ಜೀವನವನ್ನು ನೀಡುವುದು ಪ್ರತಿಯೊಂದು ಸರ್ಕಾರಗಳ ಜವಾಬ್ದಾರಿಯಾಗಿದೆ. ಸಾರ್ವಜನಿಕ ಆರೋಗ್ಯವು ಜನರ ಮತ್ತು ಅವರ ಸಮುದಾಯಗಳ ಆರೋಗ್ಯವನ್ನು ರಕ್ಷಿಸುವ ಮತ್ತು ಸುಧಾರಿಸುವ ವಿಜ್ಞಾನವಾಗಿದೆ. ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸುವ ಮೂಲಕ ರೋಗಗಳನ್ನು ತಡೆಗಟ್ಟುವಿಕೆಯನ್ನು ಸಂಶೋಧಿಸುವ ಮೂಲಕ ಮತ್ತು ಸಾಂಕ್ರಾಮಿಕ ರೋಗಗಳನ್ನು ಪತ್ತೆಹಚ್ಚುವ, ತಡೆಗಟ್ಟುವ ಮತ್ತು ಪ್ರತಿಕ್ರಿಯಿಸುವ ಮೂಲಕ ಉತ್ತಮ ಆರೋಗ್ಯವನ್ನು ಸಾಧಿಸಲಾಗುತ್ತದೆ.*

**Keywords:** *ಕರ್ನಾಟಕ ಇತಿಹಾಸ, ಬೆಳಗಾವಿ ಜಿಲ್ಲೆ, ಸಾರ್ವಜನಿಕ ಆರೋಗ್ಯ, ವೈದ್ಯಕೀಯ ಅಭಿವೃದ್ಧಿ.*

## ಪೀಠಿಕೆ

ಬೆಳಗಾವಿ ಜಿಲ್ಲೆ ಕರ್ನಾಟಕದ ವಾಯುವ್ಯ ಭಾಗದಲ್ಲಿ ಕಂಡುಬರುತ್ತದೆ. ತನ್ನ ವೈವಿಧ್ಯಮಯ ಭೌಗೋಳಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ಸಾಮಾಜಿಕ ವೈಶಿಷ್ಟ್ಯಗಳು, ಹವಾಮಾನ ಪರಿಸ್ಥಿತಿಗಳು, ನೈಸರ್ಗಿಕ ಸಂಪತ್ತು ಮತ್ತು ಕೃಷಿ ಕೇಂದ್ರವಾಗಿದೆ. ಮಲೆನಾಡು ಮತ್ತು ಕರಾವಳಿ ಪ್ರದೇಶಗಳ ಪ್ರಭಾವವನ್ನು ಹೊಂದಿದ್ದು, ಅದರ ವಿಶಿಷ್ಟ ಭೌಗೋಳಿಕ ಅಂಶಗಳು ವಾಸಸ್ಥಿತಿಗೆ ಅನುಕೂಲವಾಗಿದೆ. ಸುಮಾರು 5,38,0 ಚ.ಕಿ.ಮೀ ವಿಸ್ತೀರ್ಣವನ್ನು ಒಳಗೊಂಡಿದೆ. ಇದು 15 23’ ಮತ್ತು 16 58’ ಉತ್ತರದ ಅಕ್ಷಾಂಶ ಮತ್ತು 74 5’ ಮತ್ತು 75 28’ ಪೂರ್ವ ರೇಖಾಂಶವನ್ನು ಹೊಂದಿದೆ. ಸಮುದ್ರ ಮಟ್ಟದಿಂದ 762 ಮೀಟರ್ ಎತ್ತರದಲ್ಲಿದೆ. ಇದರಿಂದ ತಂಪಾದ ಹವಾಮಾನದ ಜೊತೆಗೆ ನೈಸರ್ಗಿಕ ಸೌಂದರ್ಯ, ವೈವಿಧ್ಯಮಯ ಭೌಗೋಳಿಕ ಅಂಶಗಳನ್ನು ಒಳಗೊಂಡಿದೆ.[1] ಇಂತಹ

[1]District Census Handbook (1961). *Belagaum District*. Mysore State, the Director of

***Please cite this article as:*** ರಾಜಣ್ಣ ಕೆ ಮತ್ತು ಸ್ಟ್ಯಾನಿ ಆರ್ ಮಿರಾಂಡಾ. (2025). ಬೆಳಗಾವಿ ಜಿಲ್ಲೆಯ ಸಾರ್ವಜನಿಕ ಆರೋಗ್ಯ ಮತ್ತು ವೈದ್ಯಕೀಯ ಅಭಿವೃದ್ಧಿ: ಒಂದು ಐತಿಹಾಸಿಕ ವಿಶ್ಲೇಷಣೆ, *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 4(1), 74–82

ಉತ್ತಮ ವಾತಾವರಣವನ್ನು ಹೊಂದಿದ್ದ ಬೆಳಗಾವಿಯನ್ನು ಪ್ರಾಚೀನ ಕಾಲದಿಂದಲೂ ಅನೇಕ ರಾಜವಂಶಗಳು, ಸಾಮಾಂತರು, ಪಾಳೆಪಟ್ಟುಗಳು ಆಳ್ವಿಕೆ ಮಾಡಿವೆ. ನಂತರ ಭಾರತಕ್ಕೆ ಬಂದ ಪಾಶ್ಚಿಮಾತ್ಯರು ಇಲ್ಲಿ ತಮ್ಮ ವ್ಯಾಪಾರ ಕೇಂದ್ರಗಳನ್ನು ಕಟ್ಟಿಕೊಂಡರು. ಮುಂದೆ ಬ್ರಿಟಿಷರು ಸೈನಿಕ ಮತ್ತು ಆಡಳಿತ ಕೇಂದ್ರವಾಗಿ ಮಾಡಿಕೊಂಡರು. ಇಲ್ಲಿ ಬ್ರಿಟಿಷರು ಆಡಳಿತವು ಭಾರತದಲ್ಲಿ ತನ್ನ ಸೇನೆ ಮತ್ತು ಅಧಿಪತ್ಯವನ್ನು ಬಲಪಡಿಸಲು ಕಂಟೋನ್ಮೆಂಟ್‌ನ್ನು ಸ್ಥಾಪಿಸಿದರು. ಬೆಳಗಾವಿ ಬ್ರಿಟಿಷರ ಸೇನೆಯ ಮುಖ್ಯ ತರಬೇತಿ ಕೇಂದ್ರವಾಗಿತ್ತು. ಇದರಿಂದ ಬ್ರಿಟಿಷರ ಕುಟುಂಬಗಳು, ಸೇನಾ ಅಧಿಕಾರಿಗಳು, ಕ್ರಿಶ್ಚಿಯನ್ ಮಿಶನರಿಗಳು ನೆಲೆಸಿದರು. ಇದರ ಪರಿಣಮವಾಗಿ ಈ ಭಾಗದಲ್ಲಿ ಚರ್ಚ್‌ಗಳು, ಮಿಷನ್ ಶಾಲೆಗಳು ಮತ್ತು ಬ್ರಿಟಿಷ್ ಕಟ್ಟಡಗಳು ತಲೆಯೆತ್ತಿದವು. ಪಾಶ್ಚಿಮಾತ್ಯ ಸಂಸ್ಕೃತಿ, ಆರ್ಕಿಟೆಕ್ಚರ್ ಮತ್ತು ಸಮಾಜಿಕ ಜೀವನದ ಮೇಲೆ ಪ್ರಭಾವ ಬೀರಿವೆ. ವಸಾಹತುಶಾಹಿ ಆಳ್ವಿಕೆಯಿಂದ ಪಾಶ್ಚಿಮಾತ್ಯ ವೈದ್ಯಕೀಯ ವಿಜ್ಞಾನ ಬೆಳೆಯುತ್ತಾ ಈ ಭಾಗದ ಜೊತೆಗೆ ಭಾರತದ ಮೇಲೂ ಪ್ರಭಾವಿಸಿತು. ಆ ಕಾಲದ ಬ್ರಿಟಿಷ ಸೇನೆಯ ಆರೋಗ್ಯ ಮತ್ತು ಸ್ಥಳಿಯ ಜನರ ಅರೈಕೆಯ ಅಗತ್ಯಗಳನ್ನು ಪೂರೈಸಲು ವ್ಯವಸ್ಥಿತವಾಗಿ ಆರೋಗ್ಯ ನೀತಿಗಳನ್ನು ರೂಪಿಸಿದರು. ಇದರಿಂದ ಬೆಳಗಾವಿಯಲ್ಲಿ ಬ್ರಿಟಿಷರು ಆರೋಗ್ಯ ಸೇವೆ ಮತ್ತು ಆಧುನಿಕ ವೈದ್ಯಕೀಯ ಚಿಕಿತ್ಸಾಕ್ರಮಗಳನ್ನು ಜಾರಿಗೊಳಿಸಿದರು.[2] ಸೇನಾ ಸಿಬ್ಬಂದಿ ಮತ್ತು ಅವರ ಕುಟುಂಬಗಳಿಗೆ ಕಂಟೋನ್ಮೆಂಟ್ ಪ್ರದೇಶದಲ್ಲಿ ಬ್ರಿಟಿಷ್ ಸೈನಿಕ ಆರೋಗ್ಯ ಸುಧಾರಣೆಗಾಗಿ, 1836ರಲ್ಲಿ ಸಿವಿಲ್ ಆಸ್ಪತ್ರೆ, 1882ರಲ್ಲಿ ಐದು ಅನುದಾನಿತ ಔಷಧಾಲಯಗಳು ತೆರೆದರು. ಈ ಆಸ್ಪತ್ರೆಗಳಲ್ಲಿ ಆಧುನಿಕ ಚಿಕಿತ್ಸೆ ಮತ್ತು ನರ್ಸಿಂಗ್ ಸೇವೆಗಳನ್ನು ಒದಗಿಸಿದರು. ಇದರಿಂದ ಈ ಭಾಗದಲ್ಲಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಅನುಕೂಲವಾಯಿತು.

ಈ ಕಂಟೋನ್ಮೆಂಟ್ ಪ್ರದೇಶದಲ್ಲಿ ತುರ್ತು ಚಿಕಿತ್ಸಾ ಘಟಕಗಳು ಮತ್ತು ಡಿಸ್ಪೆನ್ಸರಿಗಳನ್ನು ತೆರೆದು, ಈ ಕೇಂದ್ರಗಳಲ್ಲಿ ಯುರೋಪಿಯನ್ ವೈದ್ಯರು ಮತ್ತು ನರ್ಸಿಂಗ್ ಸಿಬ್ಬಂದಿಗಳನ್ನು ಹಾಗೂ ಸ್ಥಳೀಯ ಆರೈಕೆದಾರರನ್ನು ನೇಮಿಸಿದರು. ಆಯುರ್ವೇದ ಮತ್ತು ಹೋಮಿಯೋಪಥಿ ಚಿಕಿತ್ಸೆಗಳನ್ನು ಕೆಲವೊಂದು ಸಂದರ್ಭದಲ್ಲಿ ಸ್ಥಳಿಯ ಅಗತ್ಯಗಳಿಗೆ ಅನುಗುಣವಾಗಿ ಬಳಸಲಾಗುತ್ತಿತ್ತು. ಬ್ರಿಟಿಷರ ಬೆಳಗಾವಿ ಕಂಟೋನ್ಮೆಂಟ್ ಅರೋಗ್ಯ ವ್ಯವಸ್ಥೆ ಆ ಕಾಲದ ಭಾರತದಲ್ಲಿ ಬೆಳೆದ ವೈದ್ಯಕೀಯ ತಂತ್ರಜ್ಞಾನವನ್ನು ಪ್ರತಿಬಿಂಬಿಸುತ್ತವೆ.[3] ಲಸಿಕೆ ಅಭಿಯಾನಗಳು ಹಾಗೂ ಪ್ಲೇಗ್ ಮತ್ತು ಕಾಲರಾ ಇತ್ಯಾದಿ ಸಾಂಕ್ರಾಮಿಕ ರೋಗಗಗಳ ನಿಯಂತ್ರಣ ಮೂಲಕ ದೊಡ್ಡ ಬೆಳವಣಿಗೆಯನ್ನು ಕಾಣಬಹುದು. ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಆರಂಭಿಸಿ, ಆಧುನಿಕ ವೈದ್ಯಕೀಯ ವ್ಯವಸ್ಥೆಯ ಕಡೆಗೆ ಬೆಳಗಾವಿ ಆರೋಗ್ಯ ಬೆಳವಣಿಗೆಯು ಮಹತ್ವದ ಪರಿವರ್ತನೆಗಳಿಗೆ ಸಾಕ್ಷಿಯಾಗಿದೆ. ವೈದ್ಯಕೀಯ ತಂತ್ರಜ್ಞಾನ ಮತ್ತು ಸಾರ್ವಜನಿಕ ಆರೋಗ್ಯ ನೀತಿಗಳು ಮುಂದೆ ಭಾರತದ ಆರೋಗ್ಯ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿದ್ದವು.

**ಮೈಸೂರು ರಾಜ್ಯ ಸರ್ಕಾರದ ವೈದ್ಯಕೀಯ ಸವಾಲುಗಳು**

ಬ್ರಿಟಿಷರು ಆರೋಗ್ಯ ಶಿಕ್ಷಣವನ್ನು ಮತ್ತು ವೈದ್ಯಕೀಯ ಸೌಲಭ್ಯಗಳನ್ನು ತಮ್ಮ ಸೈನಿಕರು ಮತ್ತು ಅಧಿಕಾರಿ ಕುಟುಂಬಗಳಿಗೆ ಮಾತ್ರ ಕೇಂದ್ರೀಕರಿಸಿದ್ದರಿಂದ ಸಾರ್ವಜನಿಕ ಆರೋಗ್ಯದಿಂದ ವಂಚಿತವಾದ ಬೆಳಗಾವಿ ಗ್ರಾಮೀಣ ಭಾಗ ಮತ್ತು ಇತರೆ ಭಾಗದ ಜನರ ಆರೋಗ್ಯ ಸ್ಥಿತಿಯು ತುಂಬಾ

Printing, Stationery and Publications in Mysore, P - 1

[2] *Report on the Medical Topography and Statistics of the Mysore Division of the Madras army* (1844). Govt of Madras., P.54

[3] Idbi - P.54

ಘೋರಾವಾಗಿತ್ತು. 1956ರಲ್ಲಿ ರಾಜ್ಯ ಪುನರ್‌ವಿಂಗಡನಾ ಕಾಯ್ದೆ ಅಡಿಯಲ್ಲಿ ಬೆಳಗಾವಿ ಪ್ರದೇಶವನ್ನು ಮೈಸೂರು ರಾಜ್ಯಕ್ಕೆ (ಈಗಿನ ಕರ್ನಾಟಕ) ವಿಲೀನಗೊಂಡಾಗ ಬೆಳಗಾವಿ ಪ್ರದೇಶವನ್ನು ವೈದ್ಯಕೀಯವಾಗಿ ಅಭಿವೃದ್ಧಿಗೊಳಿಸುವುದು ಅಂದಿನ ಮೈಸೂರು ಸರ್ಕಾರಕ್ಕೆ ಸವಾಲಿನ ಕೆಲಸವಾಗಿತು.

- ಈ ಆರೋಗ್ಯ ಸೇವೆಯು ಮುಖ್ಯವಾಗಿ ಕಂಟೋನ್ಮೆಂಟ್ ಪ್ರದೇಶಗಳು ಮತ್ತು ನಗರ ಕೇಂದ್ರಿತವಾಗಿತ್ತು. ಆದರೆ ಗ್ರಾಮೀಣ ಜನರ ಆರೋಗ್ಯವನ್ನು ನಿರ್ಲಕ್ಷಿಸಲಾಗಿತ್ತು.
- ಆರೋಗ್ಯ ಸೇವೆಗಳಲ್ಲಿ ನಗರ ಮತ್ತು ಗ್ರಾಮೀಣ ಭಾಗದಲ್ಲಿ ಅಂತರವಿದ್ದು, ಗ್ರಾಮೀಣ ಪ್ರದೇಶಗಳು ಮೂಲ ಸೌಕರ್ಯಗಳಿಂದ ವಂಚಿತವಾಗಿತ್ತು.
- ಸಾಂಕ್ರಾಮಿಕ ರೋಗಗಳ ಹರಡುವುದನ್ನು ತಡೆಗಟ್ಟುವಲ್ಲಿ ಸಮರ್ಪಕ ಆರೋಗ್ಯ ಕಾರ್ಯಕರ್ತರ ಕೊರತೆ.
- ಈ ಪ್ರದೇಶವು ಜನಸಂಖ್ಯೆಗೆ ಅನುಗುಣವಾಗಿ ಆರೋಗ್ಯ ಮತ್ತು ವೈದ್ಯಕೀಯ ಸೇವೆ ಸೌಲಭ್ಯಗಳು ತೀರಾ ಕಡಿಮೆಯಾಗಿತ್ತು. ಇದರಜೊತೆಗೆ ಈ ಭಾಗದಲ್ಲಿ ಸಿಡುಬು, ಟೈಫಾಯಿಡ್, ಕ್ಷಯ, ಕುಷ್ಠ, ನಾರುಹುಣ್ಣು, ಫಿಲೇರಿಯ, ಮಲೇರಿಯ ಮತ್ತು ಕಾಲರಾ ಇನ್ನೂ ಮುಂತಾದ ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡು ಜನರಲ್ಲಿ ಅವ್ಯವಸ್ಥೆಯನ್ನು ಉಂಟುಮಾಡಿದ್ದವು.
- ಸಾಂಕ್ರಾಮಿಕ ರೋಗಗಳ ವ್ಯಾಪಕತೆ ಅತಿಯಾಗಿದ್ದು ಅವುಗಳನ್ನು ತಡೆಗಟ್ಟಲು ಹೆಚ್ಚಿನ ಗಮನ ನೀಡುವುದು. ಬ್ರಿಟಿಷರ ಕಾಲದ ವೈದ್ಯಕೀಯ ಯಂತ್ರೋಪಕರಣಗಳು ಹಳೆಯಾದಗಿದ್ದವು, ಮತ್ತು ಹೊಸ ತಂತ್ರಜ್ಞಾನವನ್ನು ಪರಿಚಯಿಸುವ ಅವಶ್ಯಕತೆಯು ಕೂಡ ಅಂದಿನ ಸರ್ಕಾರದ ಸವಾಲಿನ ಕೆಲಸವಾಗಿತು.
- ಬೆಳಗಾವಿ ಮೈಸೂರು ರಾಜ್ಯಕ್ಕೆ ವಿಲೀನಗೊಂಡಾಗ ಬೆಳಗಾವಿ ಭಾಗದಲ್ಲಿ ಆಸ್ಪತ್ರೆಗಳು 8, ಔಷಧಾಲಯಗಳು 48, ಹಾಸಿಗೆಗಳ ಸಂಖ್ಯೆ 155, ವೈದ್ಯರು 25, ನರ್ಸ್ 26ರಷ್ಟು ಮಾತ್ರ ಇದ್ದುವು.[4] ಜನಸಂಖ್ಯೆ ಬೆಳವಣಿಗೆಯ ಅನುಗುಣವಾಗಿ ಆಸ್ಪತ್ರೆಗಳು, ಔಷಧಾಲಯಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಘಟಕಗಳನ್ನು ಹೆಚ್ಚಿಸುವುದು ಮತ್ತು ಅದರ ತಕ್ಕಂತೆ ವೈದ್ಯರು, ದಾದಿಯರು, ಇತರೆ ಆರೋಗ್ಯ ಕಾರ್ಯಕರ್ತರನ್ನು ನೇಮಕ ಮಾಡುವುದು ಸವಾಲಿನ ಕೆಲಸವಾಗಿತು.

**ಸಾರ್ವಜನಿಕ ಆರೋಗ್ಯ ಸುಧಾರಣೆಯ ಕಾಳಜಿಗಳು**

ಸ್ವಾತ್ರಂತ್ರೋತ್ತರ ಕರ್ನಾಟಕದಲ್ಲಿ ಬೆಳಗಾವಿಯು ಸಮಗ್ರ ಆರೋಗ್ಯ ಸೇವಾ ಯೋಜನೆಗಳ ಮೂಲಕ ಗ್ರಾಮೀಣ ಮತ್ತು ನಗರ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸಲು ಕ್ರಮಗಳನ್ನು ಕೈಗೊಂಡಿತು. ಜಿಲ್ಲಾ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಖಾಸಗಿ ವೈದ್ಯಕೀಯ ಸಂಸ್ಥೆಗಳ ಸಮನ್ವಯದಿಂದ, ಜನರ ಆರೋಗ್ಯ ಮಾನದಂಡಗಳಲ್ಲಿ ಗಮನಾರ್ಹ ಬದಲಾವಣೆಯನ್ನು ತರಲು ಸಾಧ್ಯವಾಯಿತು. ಈ ನಿಟ್ಟಿನಲ್ಲಿ ಆರೋಗ್ಯವನ್ನು ಕುರಿತು ರಾಧಾಕೃಷ್ಣ ಅವರು ಹೇಳಿರುವಂತೆ, "ಸಾರ್ವಜನಿಕ ಜೀವನದಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಸೇವೆಯ ಪ್ರಾಮುಖ್ಯತೆವಷ್ಟೇ ಅಲ್ಲ, ಅದರ ಬಗ್ಗೆ ನಾವು ನಿರ್ಲಕ್ಷ ಮನೋಭಾವವನ್ನು ತಳೆದರೆ ಆದರಿಂದ ಉಂಟಾಗುವ ಅಪಾಯದ ಮುನ್ನೆಚ್ಚರಿಕೆಯನ್ನು ಒಳಗೊಂಡಿದೆ. ಆದ್ದರಿಂದತನ್ನ ನಾಗರೀಕರನ್ನು ಆರೋಗ್ಯವಂತರನ್ನಾಗಿಸುವುದು ಅಲ್ಲಿನ ಸರ್ಕಾರದ

[4] *Report on the Medical Topography and Statistics of the Mysore Division of the Madras army*, Govt of (1844). Madras. P.56-58

ಹೊಣೆಗಾರಿಯಾಗಿರುತ್ತದೆ"[5]ಎಂದು ಹೇಳಿದ್ದಾರೆ. ಭಾರತ ಸರ್ಕಾರ ಜಾರಿಗೊಳಿಸಿದ ಪಂಚವಾರ್ಷಿಕ ಯೋಜನೆಗಳನ್ನು ಮೈಸೂರು ಸರ್ಕಾರ ಅಳವಡಿಸಿಕೊಂಡು ಅನುಷ್ಠಾನಗೊಳಿಸಿತು ಹಾಗೂ ರಾಜ್ಯದ ಜಿಲ್ಲಾ ಮಟ್ಟದಲ್ಲಿ ಯೋಜನೆಗಳನ್ನು ಜಾರಿಗೊಳಿಸಲಾಯಿತು. ಬೆಳಗಾವಿ ಜಿಲ್ಲೆಯ ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದ ಆರೋಗ್ಯ ಯೋಜನಾ ಕಾರ್ಯಕ್ರಮಗಳನ್ನು ಮತ್ತು ವೈದ್ಯಕೀಯ ಸೇವೆಗಳನ್ನು ರೂಪಿಸಲಾಯಿತು. ಸಾಂಕ್ರಾಮಿಕ ರೋಗಗಳನ್ನು ಹತೋಟಿಗೆ ತರಲು ಮತ್ತು ಅವುಗಳ ವ್ಯಾಪಕತೆಯನ್ನು ತಡೆಯಲು ಪರಿಣಾಮಕಾರಿಯಾದ ಯೋಜನೆಗಳನ್ನು ಜಾರಿಗೆ ತರಲು ಪ್ರಯತ್ನ ಮಾಡಿದರು. "ಆರೋಗ್ಯವೆಂದರೆ ಕೇವಲ ರೋಗ ಮತ್ತು ದುರ್ಬಲತೆಗಳು ಇಲ್ಲದಿರುವುದಷ್ಟೇಅಲ್ಲ, ಮಾನಸಿಕ ಮತ್ತು ಸಾಮಾಜಿಕವಾಗಿ ಪೂರ್ಣ ಸ್ವಸ್ಥನಾಗಿರುವುದೇ ಆರೋಗ್ಯ ಎಂದು ವಿಶ್ವಆರೋಗ್ಯ ಸಂಸ್ಥೆಯು ತನ್ನ ಘಟನಾವಳಿಯ ಸಂಯೋಜನೆಯಲ್ಲಿ ವ್ಯಾಖ್ಯಾನಿಸಲಾಗಿದೆ,"[6] ಅದರಂತೆ ಮೈಸೂರು ಸರ್ಕಾರವು ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳ ಕಾರ್ಯಕ್ರಮಗಳನ್ನು ಹೊಸದಾಗಿ ವಿಲೀನಗೊಂಡ ಪ್ರದೇಶಗಳ ಅಗತ್ಯಗಳಿಗೆ ಅನುಗುಣವಾಗಿ ಪುನರ್ವಿಮರ್ಶಿಸಿ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಆರೋಗ್ಯ ಸುಧಾರಣೆ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಕೈಗೊಳ್ಳಲಾಯಿತು. ಆಧುನಿಕ ವೈದ್ಯಕೀಯ ಅಗತ್ಯಗಳನ್ನು ಪೂರೈಸಲು ಮೈಸೂರು ಸಂಸ್ಥಾನವು ಆರಂಭದಲ್ಲೇ ಕ್ರಮ ಕೈಗೊಂಡಿತು. ಆರ್ಥಿಕ ಯೋಜನೆಯು ಆರಂಭವಾಗುವುದಕ್ಕೆ ಮುಂಚಿತವಾಗಿ ಮಲೇರಿಯ, ಪ್ಲೇಗ್, ಕಾಲರಾ ಮತ್ತು ಸಿಡುಬು ರೋಗಗಳ ನಿಯಂತ್ರಣದ ಬಗ್ಗೆ ಮೈಸೂರಿನ ಕಮೀಷನರ್‌ಗಳ ಕಾಲದಿಂದಲೂ ಆರೋಗ್ಯ ಸೇವೆಗೆ ಹೆಚ್ಚಿನ ಮಹತ್ವ ನೀಡಿದರು.[7] ಆಸ್ಪತ್ರೆಗಳ ನಿರ್ಮಾಣ ಮಾಡಿ ಆರೋಗ್ಯದಲ್ಲಿ ಗುಣಮಟ್ಟವನ್ನು ಕಾಪಾಡುವುದರಲ್ಲಿ ಹಳೆ ಮೈಸೂರು ಸಂಸ್ಥಾನವು ಯಶಸ್ವಿಯಾಗಿತು.

ಮೈಸೂರು ರಾಜ್ಯಕ್ಕೆ ವಿಲೀನಗೊಂಡ ಬೆಳಗಾವಿ ಪ್ರದೇಶಗಳಲ್ಲಿ (ಬಾಂಬೆ ಕರ್ನಾಟಕ) ಬ್ರಿಟಿಷರ ಕಾಲದಲ್ಲಿ ನಿರ್ಮಿಸಲಾದ ಆಸ್ಪತ್ರೆಗಳು ಮತ್ತು ಡಿಸ್ಪೆನ್ಸರಿಗಳು ನಗರ ಪ್ರದೇಶದಲ್ಲಿ ಮುಂದುವರಿಯುತ್ತಿದ್ದರೂ, ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೇವೆಗಳ ವಿಸ್ತರಣೆಗೆ ಪೂರಕವಾದ ಕಾರ್ಯಕ್ರಮಗಳನ್ನು ರೂಪಿಸಿದರು. ಭಾರತ ಸರ್ಕಾರದ 1953ರಲ್ಲಿ ನ್ಯಾಷನಲ್ ಮಲೇರಿಯಾ ಕಂಟ್ರೋಲ್ ಪ್ರೋಗ್ರಾಂ ಮತ್ತು ಟಿಬಿ ನಿಯಂತ್ರಣ ಯೋಜನೆಗಳ ಮೂಲಕ ಮಲೇರಿಯ ಮತ್ತು ಕ್ಷಯರೋಗದ ನಿಯಂತ್ರಣಕ್ಕೆ ದಿಟ್ಟ ಯೋಜನೆಗಳನ್ನು ರೂಪಿಸುವ ಕ್ರಮಗಳನ್ನು ಮೈಸೂರು ಸರ್ಕಾರ ಕೈಗೊಂಡಿತು.[8] ಬೆಳಗಾವಿಯಲ್ಲಿದ್ದ ಕೆಲವು ಹಳೆಯ ಬ್ರಿಟಿಷ್ ಆಸ್ಪತ್ರೆಗಳನ್ನು ನವೀಕರಿಸಿತು ಮತ್ತು ಸಾರ್ವಜನಿಕ ಸೇವೆಗೆ ಬಳಕೆಯನ್ನು ಒದಗಿಸಿದರು. ಬೆಳಗಾವಿ ಸರ್ಕಾರಿ ಆಸ್ಪತ್ರೆಗೆ ಹೆಚ್ಚಿನ ಸೌಲಭ್ಯಗಳು ಮತ್ತು ನರ್ಸಿಂಗ್ ಕೋರ್ಸ್‌ಗಳನ್ನು ಸೇರಿಸಲಾಯಿತು. ಮೈಸೂರು ರಾಜ್ಯ ಸರ್ಕಾರವು ವಿಲೀನದ ನಂತರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಂಯೋಜಿತ ಆರೋಗ್ಯ ಯೋಜನೆಗಳನ್ನು ಸ್ಥಾಪಿಸುವ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಸೇವೆಗಳ ವಿಸ್ತರಣೆ ಮಾಡಿದರು.ಮೈಸೂರು ಸರ್ಕಾರದ ವೈದ್ಯಕೀಯ ಶಿಕ್ಷಣ ನೀತಿಗಳ ಪರಿಣಾಮವಾಗಿ, ಬೆಳಗಾವಿ ಪ್ರದೇಶದಲ್ಲಿ ವೈದ್ಯಕೀಯ

[5] Government of Mysore. (1966). *Mysore State 1956-1966,* Director of Publicity & Information, Bangalore. P 149.

[6] ಕರ್ನಾಟಕ ಪ್ರಗತಿಪಥ. (1974) ಪುಟ 183.

[7]. Puttaswaiah, K Economic Development Of Karnataka, a treatise in count unity and change, Vol-II, Oxford & IBH Published Co.PP 1045-1046.

[8] Report on the Administration of Mysore 1954-55, PP 169-170.

ಕಾಲೇಜುಗಳು ಮತ್ತುತರಬೇತಿ ಕೇಂದ್ರಗಳನ್ನು ತೆರೆಯಲಾಯಿತು. 1978ರ ವೇಳೆಗೆ ಬೆಳಗಾವಿ ಜಿಲ್ಲೆಯಲ್ಲಿ 10 ಆರೋಗ್ಯ ಸಂಸ್ಥೆಗಳು, 89 ಔಷಧಾಲಯಗಳಲ್ಲಿ ಅನುಗುಣವಾಗಿ 1411 ಮತ್ತು 235 ಹಾಸಿಗೆಯ ಮಟ್ಟ ಏರಿಕೆಯಾಯಿತು.

ಮಹಿಳಾ ಮತ್ತು ಮಕ್ಕಳ ಆರೋಗ್ಯ ಉತ್ತಮಗೊಳಿಸಲು WHO, UNICEF ಸಹಯೋಗದೊಂದಿಗೆ ಬೆಳಗಾವಿಯಲ್ಲಿ ಪ್ರಯೋಗಾಲಯಗಳನ್ನು ತೆರೆದರು. ಬುಡಕಟ್ಟು ಜನರ ಆರೋಗ್ಯ ಹಿತದೃಷ್ಟಿಯಿಂದ **"ಟ್ರೈಬಲ್ ಹೆಲ್ತ್ ಯೂನಿಟ್ ಯೋಜನೆ"** ಜಾರಿಗೆ ತರೆದರು. ಬಿಜಾಪುರ, ಬೆಳಗಾವಿ, ದಕ್ಷಿಣಕನ್ನಡ ಪ್ರದೇಶಗಳಲ್ಲಿ ಕುಷ್ಠರೋಗ ನಿವಾರಣಾ ಕೇಂದ್ರಗಳನ್ನು ತೆರೆದರು.[9] ಹೊಸದಾಗಿ ವಿಲೀನಗೊಂಡ ಬೆಳಗಾವಿ ಪ್ರಾಂತ್ಯದಲ್ಲಿ ಪ್ಲೇಗ್‌ರೋಗದ ತೀವ್ರತೆ ಹೆಚ್ಚಾಗಿದ್ದರಿಂದ ಪ್ಲೇಗ್ ರೋಗ ತಜ್ಞರ ತಂಡವನ್ನು ನೇಮಕ ಮಾಡಿ ಹಾಗೂ ಅಲ್ಲಿನ ಸ್ಥಳೀಯ ವೈದ್ಯಕೀಯ ಸಂಸ್ಥೆಗಳಿಗೆ ಸಾರ್ವಜನಿಕ ಆರೋಗ್ಯ ಸೇವೆಗಾಗಿ ವಿಶೇಷ ಅನುದಾನ ನೀಡಿದರು. ಬೆಳಗಾವಿ (ಬಾಂಬೆ ಕರ್ನಾಟಕ) ಪ್ರಾಂತ್ಯದಲ್ಲಿ 'ಸಂಚಾರಿ ಆಸ್ಪತ್ರೆಗಳ' ಘಟಕಗಳನ್ನು ಸ್ಥಾಪಿಸಿದರು.'ರಾಷ್ಟ್ರೀಯ ಮಲೇರಿಯ ನಿಯಂತ್ರಣ ಕಾರ್ಯಕ್ರಮ'ವನ್ನು ಜಿಲ್ಲಾ ಮಟ್ಟದಲ್ಲಿ ಜಾರಿಗೆ ತರಲಾಯಿತು. ರಾಷ್ಟ್ರೀಯ ಮಲೇರಿಯ ನಿಯಂತ್ರಣ ಕಾರ್ಯಕ್ರಮವನ್ನು ಮುಂದೆ 'ರಾಷ್ಟ್ರೀಯ ಮಲೇರಿಯ ನಿವಾರಣಾ ಕಾರ್ಯಕ್ರಮ'ವಾಗಿ ಪರಿವರ್ತಿಸಿದರು.ಡಿ.ಡಿ.ಟಿ. ಔಷಧಿಯ ಸಿಂಪಡಣೆಯನ್ನು ಈ ಯೋಜನೆಯಲ್ಲೂ ಮುಂದುವರಿಸಿದರು. ಇದರಿಂದ ಮಲೇರಿಯ ನಿಯಂತ್ರಣ ಬಹುಮಟ್ಟಿಗೆ ಕಡಿಮೆಯಾಯಿತು. ಸಿಡುಬು ರೋಗ ನಿವಾರಣೆಗಾಗಿ ಬಿಜಾಪುರಜಿಲ್ಲೆಯಲ್ಲಿಒಂದು ಮಾರ್ಗದರ್ಶಕಯೋಜನೆಯನ್ನು ಕೈಗೊಂಡರು. ಕ್ಷ–ಕಿರಣ ಮತ್ತು ಪ್ರಯೋಗಾಲಯ ತಜ್ಞರನ್ನು ಹೆಚ್ಚುವರಿಯಾಗಿ ನೇಮಕಾತಿ ಮಾಡಿಕೊಂಡರು. ಸವದತ್ತಿ, ಭಟ್ಕಳ, ಹಾವೇರಿ ಮತ್ತು ಬಾಗಲಕೋಟೆಗಳಲ್ಲಿ ಕಾಟೇಜ್ ಆಸ್ಪತ್ರೆಗಳನ್ನು ತೆರೆದರು. ಬೆಳಗಾವಿ, ಮಡಿಕೇರಿ ಮತ್ತು ಶಿವಮೊಗ್ಗದಲ್ಲಿ 3 ರಕ್ತ ನಿಧಿಗಳನ್ನು ಸ್ಥಾಪಿಸಿದರು.[10]ಖಾಸಗಿ ಮೆಡಿಕಲ್ ಕಾಲೇಜುಗಳ ವಿಸ್ತರಣೆ ಹಾಗೂ ದಾವಣಗೆರೆ, ಬೆಳಗಾವಿ, ಗುಲ್ಬರ್ಗ ಬೆಂಗಳೂರು, ಧಾರವಾಡಗಳಲ್ಲಿದ್ದ ಆಸ್ಪತ್ರೆಗಳ ಹಾಸಿಗೆಗಳ ಸಂಖ್ಯೆಯನ್ನು ವಿಸ್ತರಣೆ ಮಾಡಿದರು. ಕ್ಷಯ ಚಿಕಿತ್ಸಾ ಕೇಂದ್ರಗಳನ್ನು ಬೆಳಗಾವಿ, ಬಿಜಾಪುರ, ಚಿಕ್ಕಮಗಳೂರುಗಳಿಗೆ ವಿಸ್ತರಿಸಿದರು. ಮಡಿಕೇರಿಯಲ್ಲಿದ ಕ್ಷಯರೋಗ ಚಿಕಿತ್ಸಾಲಯವನ್ನು ಜಿಲ್ಲಾ ಕ್ಷಯರೋಗ ನಿವಾರಣಾ ಕೇಂದ್ರದ ದರ್ಜೆಗೆ ಏರಿಸಲಾಯಿತು. ಕನ್ನಡಕ ತಯಾರಕರು, ವಿಕಿರಣ ಚಿತ್ರಗಾರರು, ಕಣ್ಣೋರೆ ನೆರ್ಪಿಗರು, ಕ್ಷ–ಕಿರಣಗಾರರು ಮತ್ತು ಭೌತಿಕ ರೋಗ ಚಿಕಿತ್ಸಕರುಗಳಿಗೆ ತರಬೇತಿಗೆ ಅವಕಾಶ ಒದಗಿಸಲಾಯಿತು.

ಕರ್ನಾಟಕ ಸರ್ಕಾರವು ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಜನತೆ ಆರೋಗ್ಯ ಸೇವೆಗಳನ್ನು ವಿವಿಧ ಮಾದರಿಯ ಮೂಲಕ ಒದಗಿಸಲಾಯಿತು. ಕನಿಷ್ಠ ಅವಶ್ಯಕ ಕಾರ್ಯಕ್ರಮವನ್ನು ಚಾಲನೆ ಮಾಡಿ 18 ಸಂಚಾರಿ ಆಸ್ಪತ್ರೆಗಳನ್ನು ಹೆಚ್ಚುವರಿಯಾಗಿ ಆರಂಭಿಸಿದರು.[11] ವೈದ್ಯಕೀಯ ಅಭಿವೃದ್ಧಿ ಕಾರ್ಯಕ್ರಮ, ತಾಯಿ ಮಕ್ಕಳ ಆರೋಗ್ಯ ಕುಟುಂಬ ಕಲ್ಯಾಣ ಕಾರ್ಯಕ್ರಮ ಮತ್ತು ಲಸಿಕೆ ಕಾರ್ಯಕ್ರಮ, ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಸೋಂಕು ರೋಗಗಳಾದ ಅತಿಸಾರ ರೋಗಗಳ

---

9 Government of Mysore. (1956). *Second Five Year Plan 1956-61*. Planning Department. PP 171-173.

10 Government of Mysore. (1955). *Second Five Year plan, Draft 1956-61.* planning Department,

11 Government of Mysore.(1975). *The Progress of the Fifth Five Year Plan of Mysore 1974-79,* Planning Department, Pp 600-606.

ನಿಯಂತ್ರಣ, ಆರೋಗ್ಯ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮ, ಪೌಷ್ಟಿಕ ಆಹಾರ ಕಾರ್ಯಕ್ರಮ, ರಾಷ್ಟ್ರೀಯ ಗಳಗಂಡ ನಿಯಂತ್ರ ಕಾರ್ಯಕ್ರಮ, ಪ್ರಯೋಗಾಲಯ ಸೇವೆಗಳು ಮತ್ತು ಲಸಿಕೆ ತಯಾರಿಕಾ ಘಟಕಗಳು, ರೋಗ ನಿರೋಧ, ರೋಗಚಿಕಿತ್ಸೆ ಮತ್ತು ಉತ್ತೇಜಕ ಆರೋಗ್ಯ ಸೇವೆಗಳ ಬಗ್ಗೆ ಕಾರ್ಯಕ್ರಮಗಳನ್ನು ರೂಪಿಸಿದರು.[12] ತಾಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಎಕ್ಸರೇ ವಿಭಾಗಗಳು ಮತ್ತು ಲ್ಯಾಬೊರೇಟರ್‌ಗಳನ್ನು ತೆರೆದರು. ಇದರಿಂದ ವಿವಿಧ ಆಸ್ಪತ್ರೆಗಳ ಸ್ಥಾಪನೆ, ಸಾಂಕ್ರಾಮಿಕ ರೋಗಗಳ ನಿವಾರಣೆ, ದಾದಿಯರ ತರಬೇತಿ ಕಾಲೇಜುಗಳ ಸ್ಥಾಪನೆ, ಔಷಾಧಾಲಯಗಳ ಸ್ಥಾಪನೆ, ಸಮುದಾಯ ಆರೋಗ್ಯ ಅಭಿವೃದ್ಧಿ ಕಾರ್ಯಕ್ರಮ, ವೈದ್ಯರ ತರಬೇತಿಗಾಗಿ ಪ್ರೋತ್ಸಾಹ, ವೈದ್ಯಕೀಯ ಕಾಲೇಜುಗಳ ಸ್ಥಾಪನೆ, ಪ್ರಾಥಮಿಕ ಆರೋಗ್ಯ ಘಟಕಗಳು, ಕೇಂದ್ರಗಳ ಸ್ಥಾಪನೆ ಆರೋಗ್ಯ ಯೋಜನೆಗಳು ಮತ್ತು ಪೌಷ್ಟಿಕತೆಯ ಕಾರ್ಯಕ್ರಮಗಳು ಮಹಿಳೆ ಮತ್ತು ಮಕ್ಕಳಲ್ಲಿ ಆರೋಗ್ಯದ ಮಟ್ಟವನ್ನು ಸುಧಾರಿಸಲು ಆರಂಭಿಸಿದರ ಫಲವಾಗಿ ಶಿಶು ಮರಣ ಮತ್ತು ತಾಯಿ ಮರಣ ಪ್ರಮಾಣವು ಕಡಿಮೆಯಾಯಿತು.

**ಬೆಳಗಾವಿ ಜಿಲ್ಲೆಯ ಪ್ರಮುಖ ಆರೋಗ್ಯ ಸೌಲಭ್ಯ ಕೇಂದ್ರಗಳು**

ಜಿಲ್ಲಾ ಆಸ್ಪತ್ರೆ ಬೆಳಗಾವಿ (ಸಿವಿಲ್ ಆಸ್ಪತ್ರೆ), ಜನರಲ್ ಆಸ್ಪತ್ರೆ ಗೋಕಾಕ್, ಕರ್ನಾಟಕ ಆರೋಗ್ಯ ಸಂಸ್ಥೆ ಘಟಪ್ರಭಾ, ಜನರಲ್‌ಆಸ್ಪತ್ರೆ ಸವದತ್ತಿ, ಜನರಲ್ ಆಸ್ಪತ್ರೆ ಚಿಕೋಡಿ, ಜಿಲ್ಲಾ ಟಿ.ಬಿ ಕೇಂದ್ರ ಬೆಳಗಾವಿ, ನೌಕರರ ರಾಜ್ಯ ವಿಮಾ ಸಂಸ್ಥೆ (ಇ.ಎಸ್.ಐ ಬೆಳಗಾವಿ), ಮಹಾತ್ಮಗಾಂಧಿ ಆಸ್ಪತ್ರೆ ಚಿಕೋಡಿ, ಮಿಷನ್ ಆಸ್ಪತ್ರೆ ಸಂಕೇಶ್ವರ, ಲಸಿಕೆ ಸಂಸ್ಥೆ ಬೆಳಗಾವಿ, ಕುಷ್ಠರೋಗ ಆಸ್ಪತ್ರೆ ಬೆಳಗಾವಿ, ಕೆ.ಎಲ್.ಇ ಡಾ.ಪ್ರಭಾಕರಕೋರೆ ಆಸ್ಪತ್ರೆ ಮತ್ತು ವೈದ್ಯಕೀಯ ಸಂಶೋಧನಾಕೇಂದ್ರ ಬೆಳಗಾವಿ, ಹೀಗೆ ಬೆಳಗಾವಿ ಜಿಲ್ಲೆಗೆ ಮಾತ್ರವಲ್ಲದೆ ರಾಜ್ಯದ ವಿವಿಧ ಭಾಗದ ಜನರಿಗೆ ಆರೋಗ್ಯ ಸೇವೆ ಸಲ್ಲಿಸುತ್ತಿರುವ ಅತ್ಯುತ್ತಮ ಆರೋಗ್ಯ ಸಂಸ್ಥೆಗಳನ್ನು ಹೊಂದಿದೆ.[13]

ಬೆಳಗಾವಿಯ ಕೆ.ಎಲ್.ಇ ಆಸ್ಪತ್ರೆಯು ಅತ್ಯಾಧುನಿಕ ಸೌಲಭ್ಯಗಳು ಮತ್ತು ಚಿಕಿತ್ಸೆಯನ್ನು ಒದಗಿಸುವ ದೇಶದ ಅತಿದೊಡ್ಡ ಅಸ್ಪತ್ರೆಗಳಲ್ಲಿ ಒಂದಾಗಿದೆ. ಇತ್ತೀಚೆಗೆ ಅತ್ಯಾಧುನಿಕ ಕ್ಯಾನ್ಸರ್‌ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉದ್ಘಾಟಿಸಿದರು. ಇದರಿಂದ ಉತ್ತರ ಕರ್ನಾಟಕ, ಗೋವಾ, ಮಹಾರಾಷ್ಟ್ರ ಭಾಗದ ಜನರಿಗೆ ಆರೋಗ್ಯ ಸೇವೆಯನ್ನು ಒದಗಿಸಲಾಗುತ್ತದೆ. ಒಟ್ಟಾರೆ ಬೆಳಗಾವಿ ಜಿಲ್ಲೆಯ ತಾಲೂಕುವಾರು ಆಸ್ಪತ್ರೆಗಳು ಮತ್ತು ಹಾಸಿಗೆಗಳ ಬೆಳವಣಿಗೆ ಪ್ರವೃತ್ತಿ (2018ರಂತೆ) ಈ ಕೆಳಕಂಡ ಕೋಷ್ಠಕದಲ್ಲಿ ನೀಡಲಾಗಿದೆ.

ಈ ಕೋಷ್ಠಕ 1 ರಲ್ಲಿ ಬೆಳಗಾವಿ ಜಿಲ್ಲೆಯ ತಾಲ್ಲೂಕುವಾರು ಆಸ್ಪತ್ರೆಗಳು ಮತ್ತು ಹಾಸಿಗೆಗಳ ಅಂಕಿ ಅಂಶಗಳನ್ನು ಶೇಕಡವಾರು ಪ್ರಮಾಣದಲ್ಲಿ ರೇಖಾಚಿತ್ರದಲ್ಲಿ ತೋರಿಸಲಾಗಿದೆ. ಬೆಳಗಾವಿ ಜಿಲ್ಲೆಯ ಒಟ್ಟು ಹತು ತಾಲೂಕುಗಳಲ್ಲಿ ಚಿಕ್ಕೋಡಿ ತಾಲೂಕಿನಲ್ಲಿ ಅತಿ ಹೆಚ್ಚು ಶೇ.13.61ರಷ್ಟು ಸರ್ಕಾರಿ ಆಸ್ಪತ್ರೆಗಳು ಹಾಗೂ ಶೇ.5.33ರಷ್ಟು ರಾಮದುರ್ಗ ತಾಲೂಕು ಅತಿಕಡಿಮೆ ಸರ್ಕಾರಿ ಆಸ್ಪತ್ರೆಗಳನ್ನು ಹೊಂದಿದ್ದರೆ, ಶೇ.37.83ರಷ್ಟು ಬೆಳಗಾವಿ ತಾಲೂಕಿನಲ್ಲಿ ಅತಿ ಹೆಚ್ಚು ಖಾಸಗಿ ಆಸ್ಪತ್ರೆಗಳನ್ನು ಮತ್ತು ಶೇ.2.26ರಷ್ಟು ಅತಿ ಕಡಿಮೆ ಖಾಸಗಿ ಆಸ್ಪತ್ರೆಗಳನ್ನು ಒಳಗೊಂಡಿದೆ. ಒಟ್ಟಾರೆಯಾಗಿ ಬೆಳಗಾವಿ ತಾಲೂಕು ಅತಿ ಹೆಚ್ಚು ಆಸ್ಪತ್ರೆಗಳು ಮತ್ತು ಹಾಸಿಗೆಗಳನ್ನು ಹೊಂದಿದ್ದರೆ, ರಾಮದುರ್ಗ ತಾಲೂಕು ಅತಿಕಡಿಮೆ ಆಸ್ಪತ್ರೆಗಳು ಮತ್ತು ಹಾಸಿಗೆಗಳನ್ನು ಹೊಂದಿರುವುದು ಕಂಡುಬಂದಿದೆ.

[12] *ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ವಾರ್ಷಿಕ ವರದಿ 1993–94,* ಕರ್ನಾಟಕ ಸರ್ಕಾರ. ಪುಟ 1–2

[13] ಪ್ರಜಾವಾಣಿ ಪತ್ರಿಕೆ (2025, ಜನವರಿ 3).

ಈ ಮೇಲಿನ ಕೋಷ್ಟಕದಲ್ಲಿ ಗಮನಿಸಿದಂತೆ, 2018ರಂತೆ ತಾಲೂಕುವಾರು ಆಸ್ಪತ್ರೆಗಳು ಮತ್ತು ಹಾಸಿಗೆಗಳ ಬೆಳವಣಿಗೆ ಪ್ರವೃತ್ತಿಯನ್ನು ರೇಖಾ ಚಿತ್ರ–1ರಲ್ಲಿ ವಿಶ್ಲೇಷಿಸಲಾಗಿದೆ. ಒಟ್ಟು 2545 ಆಸ್ಪತ್ರೆಗಳಲ್ಲಿ, 2297 ಖಾಸಗಿ ಆಸ್ಪತ್ರೆಗಳು ಮತ್ತು ಉಳಿದ 169 ಸರ್ಕಾರಿ ಆಸ್ಪತ್ರೆಗಳಾಗಿವೆ. ಇದರ ಜೊತೆಗೆ 3370 ಹಾಸಿಗೆಗಳನ್ನು ಸರ್ಕಾರಿ ಆಸ್ಪತ್ರೆಗಳು ಹೊಂದಿವೆ.

ಬೆಳಗಾವಿ ಜಿಲ್ಲೆಯ ಮಕ್ಕಳ ಆರೋಗ್ಯದ ದೃಷ್ಟಿಯಿಂದ ವಿವಿಧ ರೀತಿಯ ಸಾಂಕ್ರಾಮಿಕ ರೋಗಗಳಿಗೆ ಲಸಿಕೆಯನ್ನು ನೀಡುವುದರ ಮೂಲಕ ಆರೋಗ್ಯವನ್ನು ಕಾಪಡುವಲ್ಲಿ ನಿರಂತರವಾಗಿ ಆಡಳಿತ ಕ್ರಮಗಳನ್ನು ಕೈಗೊಳ್ಳುತ್ತಿದೆ. 2018ರಲ್ಲಿ ಮಕ್ಕಳಿಗೆ ನೀಡಲಾದ ರೋಗ ನಿರೋಧಕ ಲಸಿಕೆಗಳನ್ನು ಶೇಕಡವಾರು ಕೆಳಗಿನ ರೇಖಾಚಿತ್ರದಲ್ಲಿ ನೀಡಲಾಗಿದೆ.

**ಕೋಷ್ಟಕ– 1**


**ತಾಲ್ಲೂಕು–ವಾರು ಆಸ್ಪತ್ರೆಗಳು ಮತ್ತು ಹಾಸಿಗೆಗಳ ಬೆಳವಣಿಗೆ ಪ್ರವೃತ್ತಿ(2018ರಂತೆ)**

| ತಾಲೂಕು | ಸರ್ಕಾರಿ ಆಸ್ಪತ್ರೆಗಳು | | ಖಾಸಗಿ ಆಸ್ಪತ್ರೆಗಳು | | ಒಟ್ಟು ಆಸ್ಪತ್ರೆಗಳು | | ಸರ್ಕಾರಿ ಆಸ್ಪತ್ರೆಯಲ್ಲಿನ ಹಾಸಿಗೆಗಳ ಸಂಖ್ಯೆ | |
|---|---|---|---|---|---|---|---|---|
| | ಸಂಖ್ಯೆ | ಶೇಕಡವಾರು | ಸಂಖ್ಯೆ | ಶೇಕಡವಾರು | ಸಂಖ್ಯೆ | ಶೇಕಡವಾರು | ಸಂಖ್ಯೆ | ಶೇಕಡವಾರು |
| ಬೆಳಗಾವಿ | 18 | 10.65 | 869 | 37.83 | 887 | 34.85 | 1156 | 34.30 |
| ಅಥಣಿ | 20 | 11.83 | 144 | 6.27 | 164 | 6.44 | 238 | 7.06 |
| ಬೈಲಹೊಂಗಲ | 17 | 10.06 | 121 | 5.27 | 138 | 5.42 | 268 | 7.95 |
| ಚಿಕ್ಕೋಡಿ | 23 | 13.61 | 290 | 12.63 | 313 | 12.30 | 328 | 9.73 |
| ಗೋಕಾಕ | 22 | 13.02 | 276 | 12.02 | 298 | 11.71 | 250 | 7.42 |
| ಹುಕ್ಕೇರಿ | 19 | 11.24 | 192 | 8.36 | 211 | 8.29 | 256 | 7.60 |
| ಖಾನಾಪೂರ | 11 | 6.51 | 90 | 3.92 | 180 | 7.07 | 238 | 7.06 |
| ರಾಯಭಾಗ | 11 | 6.51 | 169 | 7.36 | 180 | 7.07 | 238 | 7.06 |
| ರಾಮದುರ್ಗ | 9 | 5.33 | 52 | 2.26 | 61 | 2.40 | 166 | 4.93 |
| ಸವದತ್ತಿ | 19 | 11.24 | 94 | 4.09 | 113 | 4.44 | 232 | 6.88 |
| **ಒಟ್ಟು** | **169** | **100.00** | **2297** | **100.00** | **2545** | **100.00** | **3370** | **100.00** |

**ಮೂಲ: ಬೆಳಗಾವಿ ಜಿಲ್ಲೆಯ ಅಂಕಿ ಅಂಶಗಳ ನೋಟ 2017–18,**


**ರೇಖಾಚಿತ್ರ–1**

**ತಾಲೂಕು–ವಾರು ಆಸ್ಪತ್ರೆಗಳು ಮತ್ತು ಹಾಸಿಗೆಗಳ ಬೆಳವಣಿಗೆ ಪ್ರವೃತ್ತಿ (2018ರಂತೆ)**




**ರೇಖಾಚಿತ್ರ–2**

**ಮಕ್ಕಳಿಗೆ ನೀಡಲಾದರೋಗ ನಿರೋಧಕ ಲಸಿಕೆಗಳು (2017–18ರಂತೆ)**




2017–18ರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ತಾಲೂಕುವಾರು ಮಕ್ಕಳಿಗೆ ನೀಡಲಾದ ರೋಗ ನಿರೋಧಕ ಲಸಿಕೆಗಳಾದ ಡಿ.ಟಿ.ಡಿ, ಪೋಲಿಯೋ, ಬಿ.ಸಿ.ಜಿ, ದಡಾರ, ಟಿ.ಟಿ, ಮತ್ತು ಹೆಪಟೈಟಸ್ ಬಿ ಎಂಬ ಲಸಿಕೆಗಳ ಬಗ್ಗೆ ಮೇಲಿನ ಕೋಷ್ಟಕದಲ್ಲಿ ತಿಳಿಸಲಾಗಿದೆ. ಬೆಳಗಾವಿ ಜಿಲ್ಲೆಯಲ್ಲಿ ಅತೀ ಹೆಚ್ಚು ಶೇ.20ರಷ್ಟು ಬಿ.ಸಿ.ಜಿ ಲಸಿಕೆಯನ್ನು ಮಕ್ಕಳಿಗೆ ನೀಡಲಾಗಿದ್ದು. ನಂತರದಲ್ಲಿ ಶೇ.19ರಷ್ಟು ದಡಾರ ಲಸಿಕೆಯನ್ನು, ಶೇ.19ರಷ್ಟು ಡಿ.ಪಿ.ಟಿ ಲಸಿಕೆಯನ್ನು, ಶೇ.16ರಷ್ಟು ಟಿ.ಟಿ ಮತ್ತು ಪೋಲಿಯೋ

ಲಸಿಕೆಯನ್ನು ಹಾಗೂ ಶೇ.11ರಷ್ಟು ಹೆಪಟೈಟಸ್ ಬಿ ಲಸಿಕೆಗಳನ್ನು ಮಕ್ಕಳಿಗೆ ನೀಡಲಾಗಿದೆ ಎಂದು ಈ ಮೇಲಿನ ರೇಖಾಚಿತ್ರದ ಫಲಿತಾಂಶದ ಮುಖಾಂತರ ತಿಳಿದುಕೊಳ್ಳಬಹುದು.

**ಸಲಹೆಗಳು:**

- ಸರ್ಕಾರಿ ಆಸ್ಪತ್ರೆಗಳಿಗೆ ನವೀಕರಣ ಮತ್ತು ಉತ್ತಮ ಮಟ್ಟದ ಸೌಲಭ್ಯ ಒದಗಿಸುವುದು.
- ಮೂಲಭೂತ ಚಿಕಿತ್ಸಾ ಕೇಂದ್ರಗಳಾದ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು
- ಘಟಕಗಳನ್ನು ಗ್ರಾಮೀಣ ಭಾಗಗಳಲ್ಲಿ ಪ್ರಾಬಲ್ಯ ಹೆಚ್ಚಿಸುವುದು.
- ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ವೈದ್ಯರು, ನರ್ಸ್, ಆರೋಗ್ಯ ಸಹಾಯಕರನ್ನು ಹೆಚ್ಚಿಸುವುದು.
- ಸರ್ಕಾರಿ ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿಗಳಿಗೆ ಉತ್ತಮ ತರಬೇತಿ ನೀಡಿ, ಉತ್ತಮ ವೇತನ ನೀಡಿ ಪ್ರೋತ್ಸಾಹ ನೀಡುವುದು.
- ಲಸಿಕೆ ಮತ್ತು ರೋಗ ನಿರೋಧಕ ಅಭಿಯಾನ ಮಾಡಿ ಮಕ್ಕಳನ್ನು ಆರೋಗ್ಯಯುಕ್ತರನ್ನಾಗಿಸುವುದು.
- ವಿವಿಧ ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಣ ಮಾಡಲು ಆರೋಗ್ಯ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು.
- ಬಡವರಿಗೆ ಉಚಿತ ಆರೋಗ್ಯ ಸೇವೆಯನ್ನು ಒದಗಿಸುವುದು.

**ಉಪಸಂಹಾರ**

ಒಟ್ಟಾರೆಯಾಗಿ ಬೆಳಗಾವಿ ಜಿಲ್ಲೆಯ ಸಾರ್ವಜನಿಕ ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳ ವಿಸ್ತರಣೆಯಲ್ಲಿ ಸರ್ಕಾರವು ಹಲವಾರು ಕಾರ್ಯಕ್ರಮಗಳ ಯೋಜನೆಯನ್ನು ಜಾರಿಗೆ ತಂದು, ನಿರಂತರ ಸುಧಾರಣೆ, ತಂತ್ರಜ್ಞಾನ ಬಳಕೆ, ವೈದ್ಯಕೀಯ ಸೌಕರ್ಯಗಳ ವಿಸ್ತರಣೆ, ಸರ್ಕಾರ ಮತ್ತು ಖಾಸಗಿ ಸಹಯೋಗ ಅತ್ಯಗತ್ಯ. ಸಾಂಕ್ರಾಮಿಕ ರೋಗಗಳ ನಿವಾರಣೆಗಾಗಿ ಆಸ್ಪತ್ರೆಗಳು, ಲಸಿಕಾ ಕೇಂದ್ರಗಳು, ಔಷಧಾಲಯಗಳು, ಸಂಚಾರಿ ಔಷಧಾಲಯಗಳು ಮುಂತಾದ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಪರಿಣತಿ ಪಡೆದ ವೈದ್ಯಕೀಯ ಸಿಬ್ಬಂದಿಗಳಾದ ವೈದ್ಯರು, ನರ್ಸ್, ಶುಶ್ರೂಷಕಿಯರು, ಕಾಂಪೌಂಡರ್ ಮತ್ತು ಪ್ರಯೋಗಾಲಯದ ಸಿಬ್ಬಂದಿಗಳನ್ನು ನೇಮಿಸಿಕೊಂಡರು. ಸಾಂಕ್ರಾಮಿಕ ರೋಗಗಳ ವ್ಯಾಪಕತೆ ಹೆಚ್ಚಾಗಿದ್ದರಿಂದ ಅದಕ್ಕೆ ತಕ್ಕಂತೆ ವೈದ್ಯಕೀಯ ಸೌಲಭ್ಯವನ್ನು ಒದಗಿಸುವ ಸಲುವಾಗಿ ವೈದ್ಯಕೀಯ ಕಾಲೇಜುನ್ನು ವಿಸ್ತರಣೆ ಮಾಡಿ, ನರ್ಸಿಂಗ್ ಕಾಲೇಜುಗಳು ಮತ್ತು ಫಾರ್ಮಸಿ ಕಾಲೇಜುಗಳು ತೆರೆಯಲಾಯಿತು. ಹಂತ ಹಂತವಾಗಿ ವೈದ್ಯಕೀಯ ಕಾಲೇಜುಗಳನ್ನು ಆಸ್ಪತ್ರೆಗಳಾಗಿ ಮೇಲ್ದರ್ಜೆಗೆ ವಿಸ್ತರಿಸಿದರು. ಬೆಳಗಾವಿ ಜಿಲ್ಲೆಯು ಸ್ವತಂತ್ರ ನಂತರದಲ್ಲಿ ವಿವಿಧ ಆರೋಗ್ಯ ನೀತಿ ಹಾಗೂ ವೈದ್ಯಕೀಯ ಸೇವಾ ಪ್ರಯತ್ನಗಳ ಫಲವಾಗಿ ಬೆಳಗಾವಿ ಜಿಲ್ಲೆಯ ಒಟ್ಟು ಪ್ರಗತಿಯ ಕಂಡು ಬಂದರೂ ಪರಿಪೂರ್ಣವಾಗಿ ಸಾಧಿಸುವಲ್ಲಿ ಇನ್ನೂ ಸಫಲವಾಗಿಲ್ಲ.

**ಗ್ರಂಥಋಣ**


- ಕುಲಕರ್ಣಿ, ಆರ್.ಎಚ್. (1992). ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ, ವೆಂಕಟೇಶ್ವರ ಪ್ರಕಾಶನ.
- ಸೂರ್ಯನಾಥ್‌ಕಾಮತ್: ಬೆಳಗಾಂ ಜಿಲ್ಲಾ ಗೆಜಿಟೆರ್
- *ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ವಾರ್ಷಿಕ ವರದಿ 1993–94,* ಕರ್ನಾಟಕ ಸರ್ಕಾರ. ಪು.1–2
- Puttaswaiah, K. (1980). *Economic Development Of Karnataka, a treatise in count unity and change.* Vol-II, Oxford & IBH Published Co, Pp 1045-1046.